# ಹೂಡಿಕೆಗೆ ಕೆಂಪುಹಾಸು

## ಮಹಾರಾಷ್ಟ್ರ ಉದ್ಯಮಿಗಳ ಸೆಳೆಯಲು ಯತ್ನ

■ ಶ್ರೀಕಾಂತ್ ಶೇಷಾದ್ರಿ ಬೆಂಗಳೂರು

ರಾಜ್ಯದಲ್ಲಿ ಹೂಡಿಕೆ ಪ್ರಮಾಣ ಹೆಚ್ಚಿಸುವ ನಿಟ್ಟಿನಲ್ಲಿ ಪ್ರಯತ್ನ ನಡೆಸಿರುವ ವಾಣಿಜ್ಯ ಮತ್ತು ಕೈಗಾರಿಕೆ ಇಲಾಖೆ ಮಹಾರಾಷ್ಟ್ರದ ಉದ್ಯಮಿಗಳನ್ನು ಕೇಂದ್ರೀಕರಿಸಿ ವಿಶೇಷ ಪ್ರಯತ್ನ ನಡೆಸಿದೆ.

ಮಹಾರಾಷ್ಟ್ರದ ಕೊಲ್ಲಾಪುರ ಭಾಗದ ಕೈಗಾರಿಕೋದ್ಯಮಿಗಳು ಬೆಳಗಾವಿಯಲ್ಲಿ ಬಂಡವಾಳ ಹೂಡಿಕೆ ಮಾಡುವ ಸಂಬಂಧ ಕೈಗಾರಿಕೆ ಸಚಿವ ಜಗದೀಶ ಶೆಟ್ಟರ್ ಸಮ್ಮುಖದಲ್ಲಿ ಸಭೆ ನಡೆದಿದ್ದು, ಒಟ್ಟು 570 ಕೋಟಿ ರೂ. ಹೂಡಿಕೆಗೆ ಆಸಕ್ತಿ ತೋರಿ ಒಪ್ಪಂದ ಮಾಡಿಕೊಂಡಿದ್ದಾರೆ. ಈ ಬೆಳವಣಿಗೆಗೆ ಇನ್ನಷ್ಟು ವೇಗ ನೀಡಲು ಸರ್ಕಾರ ಆಸಕ್ತಿ ತಳೆದಿದೆ.

» **ಉತ್ತರ ಕರ್ನಾಟಕ ಭಾಗದಲ್ಲಿ ಹೂಡಿಕೆಗೆ ಆಹ್ವಾನ**

ಉತ್ತರ ಕರ್ನಾಟಕ ಭಾಗದಲ್ಲಿ ಕೈಗಾರಿಕೆಗಳು ಹೆಚ್ಚಾಗಬೇಕು, ಉದ್ಯೋಗ ಸೃಷ್ಟಿಯಾಗಬೇಕು. ಆ ಭಾಗದ ಆರ್ಥಿಕ ಚಟುವಟಿಕೆ ವೃದ್ಧಿಯಾಗಬೇಕೆಂಬ ನಿಟ್ಟಿನಲ್ಲಿ ಕಾರ್ಯಯೋಜನೆ ಸಿದ್ಧಪಡಿಸಲಾಗಿತ್ತು. ಇದೀಗ ಈ ಪ್ರಯತ್ನದಲ್ಲಿ ಒಂದು ಯಶ ಸಿಕ್ಕಿದೆ. ಇಂಡೊ ಕೌಂಟ್ ಇಂಡಸ್ಟ್ರೀಸ್ ಲಿ. ಮುಂಬೈ, ಗೋದಾವರಿ ಬಯೋರಿಫೈನರೀಸ್ ಲಿ. ಮುಂಬೈ, ಜೀನ ಸ್ಪೆಷಲ್ ಸ್ಟೀಲ್ ವರ್ಕ್ಸ್ ಪ್ರೈ.ಲಿ., ಕ್ವಾಲಿಟಿ ಅನಿಮಲ್ ಫೀಡ್ಸ್ ಪ್ರೈವೇಟ್ ಲಿ., ವಿಜಯ್ ಶಂತ್ರಿ ಅಗ್ರೋ ಟೆಕ್ ಎಕ್ಸ್‌ಪೋರ್ಟ್ಸ್, ಅಶೋಕ್ ಐರನ್ ವರ್ಕ್ಸ್ ಪ್ರೈ.ಲಿ., ಶ್ರೀ ಆನಂದ್ ಲೈಫ್ ಸೈನ್ಸಸ್ ಲಿ.ನೊಂದಿಗೆ ಪ್ರತ್ಯೇಕವಾಗಿ ಸಭೆ ನಡೆಸಿ ಬಂಡವಾಳ ಹೂಡಿಕೆ, ಕೈಗಾರಿಕೆ ಕ್ಷೇತ್ರದ ಬೆಳವಣಿಗೆ ಬಗ್ಗೆ ಸರ್ಕಾರ ಚರ್ಚೆ ನಡೆಸಿತ್ತು.

ಬೆಳಗಾವಿ ಮತ್ತು ಹುಬ್ಬಳ್ಳಿ ವ್ಯಾಪ್ತಿಯಲ್ಲೇ ಇವರೆಲ್ಲ ಕೈಗಾರಿಕೆ ಆರಂಭಿಸಬೇಕೆಂಬ ಕೋರಿಕೆಗೆ ಮಾನ್ಯತೆ ಸಿಕ್ಕಿದ್ದು, ಪ್ರಾಥಮಿಕ ಮಾಹಿತಿ ಪ್ರಕಾರ 570 ಕೋಟಿ ರೂ. ಹೂಡಿಕೆಯಾಗುತ್ತಿದೆ. ಮುಂದೆಯೂ ಹುಬ್ಬಳ್ಳಿ, ಬೆಳಗಾವಿ ಭಾಗದಲ್ಲಿ ಕೈಗಾರಿಕೆಸ್ನೇಹಿ ವಾತಾವರಣ ಇದೆ ಎಂಬುದನ್ನು ಮಹಾರಾಷ್ಟ್ರದ ಉದ್ಯಮಿಗಳಿಗೆ ಮನವರಿಕೆ ಮಾಡಿಕೊಡಲು ಉದ್ದೇಶಿಸಲಾಗಿದೆ.



> ಉತ್ತರ ಕರ್ನಾಟಕ ಭಾಗದಲ್ಲಿ ಹೂಡಿಕೆ ಪ್ರಮಾಣ ಹೆಚ್ಚಿಸುವ, ಉದ್ಯೋಗ ಸೃಷ್ಟಿಸುವ ನಿಟ್ಟಿನಲ್ಲಿ ನಮ್ಮ ಪ್ರಯತ್ನ ನಡೆದಿದೆ. ಹುಬ್ಬಳ್ಳಿಯಲ್ಲಿ ಸಮಾವೇಶ ಮಾಡುವ ಮೂಲಕ ವಿಶೇಷ ಒತ್ತು ನೀಡಲಾಗುತ್ತಿದೆ.
>
> | **ಜಗದೀಶ ಶೆಟ್ಟರ್** ಕೈಗಾರಿಕೆ ಸಚಿವ

ಇದೇ ಪ್ರಯತ್ನದ ಭಾಗವಾಗಿ 2020ರ ಜ.17ರಂದು ಇನ್ವೆಸ್ಟ್ ಕರ್ನಾಟಕ ಹುಬ್ಬಳ್ಳಿ ಸಮಾವೇಶ ಆಯೋಜಿಸಲಾಗಿದೆ. ಅಲ್ಲಿಗೆ 500 ಉದ್ಯಮಿಗಳನ್ನು ಆಹ್ವಾನಿಸಿ ಹೂಡಿಕೆ ಮಾಡುವಂತೆ ಅವರ ಮನವೊಲಿಸುವ ಪ್ರಯತ್ನ ಮಾಡಲಾಗುತ್ತದೆ. ತಮ್ಮ ಕೈಗಾರಿಕೆ ವಿಸ್ತರಣೆ ಮನಸ್ಥಿತಿಯಲ್ಲಿರುವ ಮಹಾರಾಷ್ಟ್ರ ಉದ್ಯಮಿಗಳಿಗೆ ಕರ್ನಾಟಕವೇ ಸೂಕ್ತ ಎಂದು ಬಿಂಬಿಸುವ ಕೆಲಸವೂ ನಡೆಯಲಿದೆ. ಯಾವ ಕ್ಷೇತ್ರಕ್ಕೆ ಬಂಡವಾಳ ಹೂಡಿಕೆ ಮಾಡಲು ಸೂಕ್ತವಿದೆ, ಸರ್ಕಾರದ ಸೌಲಭ್ಯಗಳು, ರಿಯಾಯಿತಿಗಳು, ಪ್ರೋತ್ಸಾಹದ ಬಗ್ಗೆ ಮನದಟ್ಟು ಮಾಡಿಕೊಡಲಾಗುತ್ತದೆ.

ಉತ್ತರ ಕರ್ನಾಟಕದಲ್ಲಿ ಉದ್ಯಮ ತೆರೆಯಲು ವಾತಾವರಣವಿದೆ, ಜತೆಗೆ ಆ ಭಾಗದಲ್ಲಿ ಕೌಶಲ ತರಬೇತಿ ನೀಡುವುದರಿಂದ ಮಾನವ ಸಂಪನ್ಮೂಲ ಹೆಚ್ಚಲಿದೆ ಎಂಬ ಆಶಯದ ಮೇಲೆ ಚಟುವಟಿಕೆ ನಡೆದಿದೆ. ಹುಬ್ಬಳ್ಳಿ, ಬೆಳಗಾವಿ, ಕಲಬುರಗಿಯಲ್ಲೂ ವಿಮಾನ ಸೇವೆ ಇರುವುದರಿಂದ ವಿದೇಶಿ ಹೂಡಿಕೆ ತರುವ ಬಗ್ಗೆಯೂ ಇಲಾಖೆಯಲ್ಲಿ ಚರ್ಚೆ ನಡೆದಿದೆ.